# SRUJANI

ISSN: 2583-3510

## Indian Journal of Innovative Research and Development (SIJIRD)

**Volume-1 (01), March-April 2022, Pp. 7-10**
**Bi-Monthly, Peer-Reviewed, Open Access, Indexed Journal**
srujanifoundation@gmail.com
editor@srujani.in
www.srujani.in


# ಆನೆಗೊಂದಿ ಕೋಟೆ ಪರಿಸರ: ಒಂದು ಚಾರಿತ್ರಿಕ ಅಧ್ಯಯನ


**ಪಾವನ ಜಿ**

ಸಂಶೋಧನಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.



***Abstract:***

ತುಂಗಭದ್ರಾ ನದಿಯ ಬಲದಂಡೆಯ ಮೇಲಿರುವ ಆನೆಗೊಂದಿ ಗ್ರಾಮವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿದೆ. ಈ ಗ್ರಾಮವು 721.7 ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿದ್ದು, 2011 ನೇ ಗಣತಿ ಪ್ರಕಾರ 3,733 ಜನರು ವಾಸ ಮಾಡುತ್ತಿದ್ದಾರೆ. ಆನೆಗೊಂದಿಯು ಪ್ರಾಗಿತಿಹಾಸಿಕ ಕಾಲದಿಂದ ಇಂದಿನವರೆಗೂ ಜನವಸತಿ ಹೊಂದಿದ ಪ್ರದೇಶವಾಗಿದ್ದು, ಫಲವತ್ತಾದ ಭೂಪ್ರದೇಶವನ್ನು ಹೊಂದಿದೆ. ಐತಿಹಾಸಿಕವಾಗಿ ತನ್ನದೇಯಾದ ಮಹತ್ವವನ್ನು ಹೊಂದಿರುವ ಗ್ರಾಮವಾಗಿದೆ.



***Key Words:*** ಆನೆಗೊಂದಿ ಕೋಟೆ, ಬುರುಜು, ಕಣ, ಕೊಳ, ಹೊನ್ನಗಸೆ ಬಾಗಿಲು, ತಳವಾರಘಟ್ಟ ಬಾಗಿಲು.


**ಪೀಠಿಕೆ**

ಆನಗೊಂದಿ ಗ್ರಾಮದ ಪರಿಸರದಲ್ಲಿ ಬೃಹತ್‌ಶಿಲಾಯುಗ ಕಾಲದ ನೆಲೆಗಳಿದ್ದು, ಅದರಲ್ಲಿ ಒಟ್ಟು 37 ಲೋಹದ ವಸ್ತುಗಳು ದೊರೆತಿವೆ. ಅವುಗಳಲ್ಲಿ 32 ಕಬ್ಬಿಣದ ವಸ್ತುಗಳಾಗಿದ್ದು ಅವುಗಳು ಮಸ್ಕಿ-ಬ್ರಹ್ಮಗಿರಿ ಪ್ರದೇಶದಲ್ಲಿ ದೊರೆತ ವಸ್ತುಗಳನ್ನು ಹೋಲುತ್ತದೆ. ಎರಡೂ ಪ್ರದೇಶಗಳಲ್ಲಿ ದೊರೆತ ವಸ್ತುಗಳ ಸಾಮ್ಯತೆಯಿಂದ ಅಂದಿನ ವಿವಿಧ ಪ್ರದೇಶದ ಜನರು ಸಾಮಾಜಿಕ ಮತ್ತು ಆರ್ಥಿಕವಾಗಿ ಸಂಬಂಧವನ್ನು ಹೊಂದಿದ್ದರು ಎಂದು ದೃಢಪಡುತ್ತದೆ. ತುಂಗಾಭದ್ರಾ ಪರಿಸರದಲ್ಲಿಯೂ ಒಟ್ಟು 134 ಲೋಹದ ವಸ್ತುಗಳು ಮತ್ತು 89 ಕಬ್ಬಿಣದ ವಸ್ತುಗಳು ದೊರೆತಿವೆ. ಅವುಗಳಲ್ಲಿ ಉಳಿ, ಮೊಳೆ, ಕೊಕ್ಕೆ, ಮುಂತಾದವುಗಳಿವೆ. ಈ ಎಲ್ಲಾ ವಸ್ತುಗಳು ಬೃಹತ್‌ಶಿಲಾಯುಗಕ್ಕೆ ಸೇರಿದವುಗಳಗಿವೆ. ವಸತಿನೆಲೆಗಳಲ್ಲಿ ಬಿಲ್ಲಿನ 'Z' ಆಕಾರದ ಕಬ್ಬಿಣದ ವಸ್ತುಗಳು ದೊರೆತಿವೆ. ಈ ನೆಲೆಯಲ್ಲಿ ಶಿಲಾಗೋರಿಗಳು ಇಲ್ಲದಿರುವುದರಿಂದ ಇದು ವಸತಿನೆಲೆ ಅಥವ ಕೈಗಾರಿಕ ಪ್ರದೇಶವಿರವಹುದೆಂದು ಊಹಿಸಲಾಗಿದೆ.

ಈ ನೆಲೆಗಳಲ್ಲಿ ಕಬ್ಬಿಣದ ವಸ್ತುಗಳ ಜೊತೆಗೆ ಅಂದಿನ ಕಾಲದ 64,000 ಸಸ್ಯಗಳ ಪರಾಗಗಳು ಹಾಗೂ ಪ್ರಾಣಿಗಳ ಅವಶೇಷಗಳು ದೊರೆತಿವೆ. ದೊರೆತಿರುವ ಅವಶೇಷಗಳ ಆಧಾರದ ಮೇಲೆ ಜಿಂಕೆ, ಪಕ್ಷಿಗಳು, ಆಮೆ, ಮೀನು, ನೀರೆಮ್ಮೆ, ಕುರಿ, ಮೇಕೆ ಹಸುಗಳನ್ನು ತಮ್ಮ ಉಪಜೀವನಕ್ಕೆ ಹಾಗೂ ಎತ್ತುಗಳನ್ನು ವ್ಯವಸಾಯಕ್ಕಾಗಿ ಸಾಕುತ್ತಿದ್ದರು ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ. ಈ ಎಲ್ಲಾ ಪ್ರಾಣಿಗಳ ಸಗಣಿಯನ್ನು ಒಟ್ಟುಗೂಡಿಸಿ ಸುಟ್ಟಿರುವುದರಿಂದ ಬೂದಿದಿಬ್ಬವಾಗಿದೆಂದು ಅಭಿಪ್ರಾಯಿಸಲಾಗಿದೆ. ಉತ್ಖನನದಲ್ಲಿ ದೊರೆತ ಸಸ್ಯಗಳ ಪಾರಾಗದಿಂದ ಗೋಧಿ-ಬಾರ್ಲಿಯನ್ನು ಹಾಗೂ ನಂತರದ ಕಾಲಘಟ್ಟದಲ್ಲಿ ಭತ್ತವನ್ನು ಹೆಚ್ಚು ಬೆಳೆಯುತ್ತಿದ್ದರು ಎಂಬ ಅಭಿಪ್ರಾಯವಿದೆ.

**ಆನೆಗೊಂದಿ ಕೋಟೆ**

ಆನೆಗೊಂದಿ ಕೋಟೆಯನ್ನು ಏಳು ಸುತ್ತಿನ ಕೋಟೆ ಎಂದು ಕರೆಯುತ್ತಾರೆ. ಈ ಕೋಟೆಯ ದಕ್ಷಿಣ ಮತ್ತು ಪೂರ್ವ ದಿಕ್ಕಿನಲ್ಲಿ ತುಂಗಭದ್ರಾ ನದಿ ಮತ್ತು ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ತಲೆ ಎತ್ತಿರುವ ಎತ್ತರವಾದ ಬೆಟ್ಟಗಳು ಕಂಡು ಬರುತ್ತವೆ. ನೈಸರ್ಗಿಕವಾಗಿ ರಕ್ಷಣಾತ್ಮಕವಾದ ಪ್ರದೇಶದಲ್ಲಿದ್ದು, ಇದು ಹೊರ ಕೋಟೆಯ ಬಾಗಿಲಿನಿಂದ ತುಂಗನದಿ ದಂಡೆಯ ಅಂಬಿಗರ ಬಾಗಿಲಿನವರೆಗೆ ಅಂದರೆ ತಳವಾರಘಟ್ಟ ಬಾಗಿಲಿನಿಂದ ಪಶ್ಚಿಮದಲ್ಲಿ ಬೆಟ್ಟದ ಕೆಳಗಿರುವ ಬಾಗಿಲಿನವರೆಗೆ ಆವರಿಸಿದೆ. ವಿಸ್ತೀರ್ಣದಲ್ಲಿ ಇದು ಕೊಪ್ಪಳದಲ್ಲಿರುವ ಕೋಟೆಗಳಿಗಿಂತ ದೊಡ್ಡದಾಗಿದೆ.

**ಪ್ರಸ್ತುತ ಕೋಟೆಯ ಸ್ಥಿತಿಗತಿ**

ಆನೆಗೊಂದಿ ಕೋಟೆಯನ್ನು ಚೌಕಾಕರವಾದ ಕಲ್ಲುಗಳನ್ನು ಬಳಸಿಕೊಂಡು ಕಟ್ಟಿದ್ದಾರೆ. ದಕ್ಷಿಣ ದಿಕ್ಕಿನಲ್ಲಿ ಒಂದು ದಿಡ್ಡಿ ಬಾಗಿಲು ಈ ಬಾಗಿಲಿನ ಪ್ರವೇಶದ್ವಾರದಲ್ಲಿ ಎರೆಡು ಶಿಲ್ಪಗಳಿದ್ದು, U ಆಕಾರದಲ್ಲಿ ಕಟ್ಟಿದ್ದಾರೆ. ಈ ಕೋಟೆಗೋಡೆಯನ್ನು ಗ್ರಾನೈಟ್ ಕಲ್ಲು, ಗಾರೆ ಮತ್ತು ಸುಣ್ಣ ಬಳಸಿ ಜೀರ್ಣೋದ್ಧಾರ ಮಾಡಲಾಗಿದೆ. ಈ ಕೋಟೆ ಗೋಡೆಯನ್ನು ಇಂಟರ್‌ಲಾಕ್‌ನ ಮಾದರಿಯಲ್ಲಿ


*Please cite this article as:* ಪಾವನ ಜಿ. (2022). ಆನೆಗೊಂದಿ ಕೋಟೆ ಪರಿಸರ: ಒಂದು ಚಾರಿತ್ರಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(1), 7–10

ನಿರ್ಮಾಣ ಮಾಡಿದ್ದಾರೆ. ಕೋಟೆ ಗೋಡೆಗೆ ಹೊಂದಿಕೊಂಡಂತೆ ಮನೆಯನ್ನು ನಿರ್ಮಿಸಿದ್ದಾರೆ. ಈ ಕೋಟೆಯಲ್ಲಿ ಸುಮಾರು 50 ಅಡಿ ದೂರ ಕ್ರಮಿಸಿದ ನಂತರ ಕೋಟೆಯ ಮೊದಲ ಪ್ರವೇಶ ದ್ವಾರ ಸಿಗುತ್ತದೆ. ಮಂಟಪ ಬಲಬದಿಗೆ ಸುಮಾರು 60 ಮೀಟರ್ ಹಾಗೂ ಎಡಬದಿಗೆ ಸುಮಾರು 2 ಮೀಟರ್ ಗೋಡೆಯನ್ನು ಕಟ್ಟಲಾಗಿದ್ದು, ಬೆಟ್ಟಕ್ಕೆ ಹೊಂದಿಕೊಂಡಂತೆ ಈ ಕೋಟೆಯನ್ನು ಕಟ್ಟಿರುವುದರಿಂದ ಕೋಟೆಯ ಹಿಂದೆ ಮುಂದಕ್ಕೆ ಅಂದರೆ ಜಿಗ್‌ಜಾಗ್ ಮಾದರಿಯಲ್ಲಿದೆ.

**ಊರಿನ ಪಶ್ಚಿಮಕ್ಕಿರುವ ಬೆಟ್ಟದ ಮೇಲಿನ ಕೋಟೆ**

ಬೆಟ್ಟದ ಎತ್ತರಕ್ಕನುಗುಣವಾಗಿ ಈ ಕೋಟೆಯನ್ನು ಮೇಲಿನ ಕೋಟೆ, ಮಧ್ಯಕೋಟೆ, ಕೆಳಗಿನ ಕೋಟೆಗಳೆಂದು ವಿಂಗಡಿಸಿಬಹುದಾಗಿದೆ. ಮೇಲಿನ ಕೋಟೆಗೆ ಪೂರ್ವದಿಕ್ಕಿನಿಂದ ಹೋಗುವ ದಾರಿಯಲ್ಲಿ ಮೂರು ಬಾಗಿಲುಗಳಿವೆ. ಈ ಕೋಟೆಯ ಎರಡು ದ್ವಾರಮಂಟಪಗಳನ್ನು ದಾಟಿ ಬೆಟ್ಟದ ಮೇಲ್ಭಾಗಕ್ಕೆ ತೆರಳಿದಾಗ ಅಲ್ಲಿ ವಿಶಾಲವಾದ ಬಯಲು ಪ್ರದೇಶವಿದೆ. ಉತ್ತರ ದಕ್ಷಿಣವಾಗಿ ಸುಮರು 300 ಮೀ. ಪೂರ್ವ– ಪಶ್ಚಿಮವಾಗಿ ಸುಮಾರು 150 ಮೀ, ವಿಶಾಲವಾದ ಪ್ರದೇಶವಿದ್ದು, ಈ ಪ್ರದೇಶಕ್ಕೆ ಮುಖ ಭಾಗದಲ್ಲಿ ಹೊರತುಪಡಿಸಿ ಎಲ್ಲಾ ಕಡೆ ಎತ್ತರವಾದ ಬೆಟ್ಟವಿದೆ. ಹಾಗಾಗಿ ಇದು ಅತ್ಯಂತ ಗೌಪ್ಯವಾದ ಕೋಟೆ ಎನ್ನಬಹುದು.

**ಕೋತ್ತಳಗಳು\ಬುರುಜು**

ಆನೆಗೊಂದಿ ಕೋಟೆಯಲ್ಲಿ ಆಯತಾಕಾರದ ಅರ್ಧವೃತ್ತಾಕಾರದ ಕೋತ್ತಳಗಳಿವೆ. ಊರ ಸುತ್ತಲಿರುವ ಕೋಟೆಯಲ್ಲಿ ಚೌಕಾಕಾರದ ಕೋತ್ತಳಗಳಿವೆ. ಇವುಗಳನ್ನು ಹೊನ್ನಗಸಿ ಮತ್ತು ಅಂಬಿಗರವ ಬಾಗಿಲ ಬದಿಯಲ್ಲಿ ನೋಡಬಹುದು. ಆದರೆ ಪ್ರಸ್ತುತ ಈ ಕೋತ್ತಳ ಮೇಲೆ ಹೋಗುವುದಕ್ಕೆ ಮೆಟ್ಟಿಲು ಇರುವಂತೆ ಗೋಚರಿಸುತ್ತದೆ. ಪಶ್ಚಿಮ ಭಾಗದ ಬೆಟ್ಟದ ಮಧ್ಯದ ಕೋಟೆಯಲ್ಲಿ ಐದು ಕೋತ್ತಳ/ಬುರುಜುಗಳಿದ್ದು, ಅವುಗಳಲ್ಲಿ ನಾಲ್ಕು ಕೋತ್ತಳಗಳು ಮಾತ್ರ ಗೋಚರಿಸುತ್ತದೆ. ಇನ್ನೊಂದು ಅಸ್ಪಷ್ಟವಾಗಿದೆ. ಇವುಗಳು ನಾಲ್ಕು ದಿಕ್ಕುಗಳಲ್ಲಿಯೂ ಬೆಟ್ಟದ ಮೇಲಿದ್ದು, ಕೋತ್ತಳಗಳ ಮೇಲೆ ಹೋಗುವುದಕ್ಕೆ ಒಳಭಾಗದಲ್ಲಿ ಕೊಂಡಿಯನ್ನು ಹೊಂದಿದೆ.

**ಕಾವಲು ಗೋಪುರ**

ಕೋಟೆಗೋಡೆಯ ಪಕ್ಕದ ಎತ್ತರವಾದ ಬಂಡೆ ಮತ್ತು ಬೆಟ್ಟದ ತುದಿಯ ಮೇಲೆ ಅರ್ಧವೃತ್ತಾಕಾರದ ಕಾವಲು ಗೋಪುರಗಳಿವೆ. ಇವುಗಳಿಗೆ ಚಿಕ್ಕದಾದ ಬಾಗಿಲುಗಳಿವೆ. ಆದರೆ ಈ ಬಾಗಿಲು ಪ್ರಸ್ತುತ ನಾಶವಾಗಿದೆ. ಅತಿ ಚಿಕ್ಕ ಚಿಕ್ಕ ಕಲ್ಲು ಮತ್ತು ಗಾರೆಯಿಂದ ಕಟ್ಟಿದ ಗೋಡೆಗಳಲ್ಲಿ ಬಂದೂಕು ಕಿಂಡಿಗಳಿವೆ ಮತ್ತು ಸುತ್ತಲಿನ ಗೋಡೆಯು ಬದಿಯಲ್ಲಿ ಎಂಟು ದಿಕ್ಕಿಗೆ ಕಂಬಗಳನ್ನು ನಿಲ್ಲಿಸಿದ್ದಾರೆ. ಈಗ ಬರೀ ಕಂಬಗಳು ಮಾತ್ರ ಕಾಣಬಹುದು. ಈ ಕಾವಲು ಗೋಪುವನ್ನು 17–18ನೇ ಶತಮಾನದಲ್ಲಿ ಕಟ್ಟಿರಬಹುದು.

**ಕಣಜಗಳು**

ಊರಿನ ಪಶ್ಚಿಮಕ್ಕಿರುವ ಬೆಟ್ಟದ ಮೇಲಿನ ಕೋಟೆಯಲ್ಲಿ ಆರು ಮತ್ತು ಮಧ್ಯದ ಕೋಟೆಯಲ್ಲಿ ಕೋಟೆಯಲ್ಲಿ ಮೂರು ವೃತ್ತಾಕಾರ ಮತ್ತು ಮೂರು ಆಯತಾಕಾರದ ಕಣಜಗಳಿವೆ. ಇವುಗಳನ್ನು ಚಿಕ್ಕ ಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದೆ. ಆಯತಕಾರಾದ ದೊಡ್ಡ ಕಣಜದ ಮೇಲೆ ಒಂದು ತೊಲೆಯಿದ್ದು ಅದರ ಮೇಲೆ ಒಂದು ತೊಲೆ ಇದ್ದಿರಬಹುದು. ಮಧ್ಯದ ಕೋಟೆಯೊಳಗೆ ದೊಡ್ಡ ಕಣಜವನ್ನು ನಿರ್ಮಾಣ ಮಾಡಿದ್ದಾರೆ. ಹೊರಗಿನಿಂದ ಮತ್ತು ಒಳಗಿನಿಂದ ಹೋಗುವುದಕ್ಕೆ ಮೆಟ್ಟಿಲುಗಳಿವೆ. ಪ್ರಸ್ತುತ ಈ ಮೆಟ್ಟಿಲುಗಳು ಹೊರ ಭಾಗದಲ್ಲಿ ದೊಡ್ಡ ಹಾಸುಬಂಡೆಯ ಮೇಲೆ ಕಾಣುತ್ತೇವೆ. ತುಂಬಾ ದೊಡ್ಡದಾದ ಈ ಕಟ್ಟಡವನ್ನು ಸ್ಥಳೀಕರು ಆನೆಸಾಲೆಂದು ಕರೆಯುತ್ತಾರೆ.

**ಕೊಳಗಳು**

ಆನೆಗೊಂದಿ ಕೋಟೆ ನದಿಯ ದಂಡೆಯ ಮೇಲಿರುವುದರಿಂದ ಈ ನದಿಯೇ ಈ ಗ್ರಾಮದ ರಕ್ಷಣೆಯಾಗಿದೆ. ಗ್ರಾಮದಲ್ಲಿ ಅನೇಕ ಬಾವಿಗಳು ಕೆಲವು ಕಡೆ ಮಾತ್ರ ಉಳಿದಿದೆ. ಇನ್ನು ಕೆಲವುಗಳನ್ನು ನಾಶಮಾಡಿದ್ದಾರೆ. ಬೆಟ್ಟದ ಮೇಲಿನ ಕೋಟೆ ಕೆಳಗಿನಿಂದ ನೀರನ್ನು ಒಯ್ಯುವುದಕ್ಕೆ ತೊಂದರೆ ಎಂದು ಅಲ್ಲಿಯೇ ನೀರಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಪ್ರಸ್ತುತ ಪಶ್ಚಿಮ ದಿಕ್ಕಿನ ಮೇಲಿನ ಕೋಟೆಯೊಳಗೆ ಎರಡು ಕೊಳಗಳಿವೆ.

**ಬಾಗಿಲುಗಳು**

ವಿಶಾಲವಾದ ಕೋಟೆ ಸುತ್ತುಗಳಲ್ಲಿ 40ಕ್ಕೂ ಹೆಚ್ಚು ಬಾಗಿಲುಗಳು, ಗುಪ್ತದ್ವಾರಗಳಿರುವ ಚಿಕ್ಕ ಬಾಗಿಲುಗಳಿದ್ದವು. ಪ್ರಸ್ತುತ ಈ ಬಾಗಿಲು ಕೆಲವೆಡೆ ಮಾತ್ರ ಉಳಿದುಕೊಂಡಿವೆ. ಕೆಲವು ಕಡೆ ಶಿಥಿಲಾವಸ್ಥೆಯಲಿದ್ದರೆ ಇನ್ನು ಕೆಲವು ಕಡೆ ಕಟ್ಟೆಗಳು ಮಾತ್ರ ಉಳಿದಿವೆ.

**ಹೊನ್ನಗಸೆ ಬಾಗಿಲು**

ಪಶ್ಚಿಮಕ್ಕೆ ಗದ್ದೆಗಳ ಮಧ್ಯದಲ್ಲಿದೆ. ಇದರ ಬದಿಗಳಲ್ಲಿದ್ದ ಕೋಟೆ ಈಗಿಲ್ಲ. ಉತ್ತರಾಭಿಮುಖವಾಗಿರುವ ಈ ಬಾಗಿಲು ಶಿಥಿಲಾವ್ಯವಸ್ಥೆಲ್ಲಿದೆ. ಈ ಬಾಗಿಲು ಚೌಕಟ್ಟಿನ ಮೇಲೆ ಅಲಂಕಾರರಹಿತ ಪಟ್ಟಿಕೆಗಳಿವೆ. ಪ್ರಸ್ತುತ ಮಧ್ಯದ ಒಳ ಮಾಳಿಗೆಯಲ್ಲಿ ಚಪ್ಪಡಿಕಲ್ಲು ಬಿದ್ದಿದೆ. ಈ ಬಾಗಿಲ ಪಕ್ಕದ ಅರೆಗಂಬ ಮತ್ತು ಇತಂಹ ಕಂಬಗಳನ್ನು ಕಾಕತೀಯರ ಕಾಲದ ತೋರಣಗಳಲ್ಲಿ ಮತ್ತು ದೇವಾಲಯಗಳಲ್ಲಿ ಕಾಣುತ್ತೇವೆ. ಆದುದರಿಂದ ಇದು 13ನೇ ಶತಮಾನದ ಬಾಗಿಲೆಂದು ಹೇಳಲಾಗಿದೆ. ಬಾಗಿಲ ಹತ್ತಿರ ಬಂಡೆಯ ಮೇಲಿರುವ ಶಾಸನವು ಇದನ್ನು 'ಕಲ್ಲುಗಸೆ' ಎಂದು ಉಲ್ಲೇಖಿಸುತ್ತದೆ.

**ತಳವಾರಘಟ್ಟ ಬಾಗಿಲು**

ಈ ಬಾಗಿಲು 422 ಮೀಟರ್ ಎತ್ತರ ಹೊಂದಿದೆ. ಕೋಟೆಯ ಬಾಗಿಲು ಕ್ರಿ. ಶ. 14–16 ನೇ ಶತಮಾನದಲ್ಲಿ ಆಯಾತಕಾರವಾಗಿರುವ ಈ ದ್ವಾರವನ್ನು ಎತ್ತರವಾದ ಕಟ್ಟೆಯ ಮೇಲೆ ನಿರ್ಮಿಸಲಾಗಿದೆ. ಇಲ್ಲಿ ವೃತ್ತ ಮತ್ತು ಚೌಕಾಕಾರದ ಕಂಬಗಳಿವೆ. ದಕ್ಷಿಣದ ದಿಕ್ಕಿನ ದ್ವಾರದಲ್ಲಿ ಗದೆ ಹಿಡಿದ ದ್ವಾರಪಾಲಕರಿದ್ದು, ಲಲಾಟದಲ್ಲಿ ಹೂವು, ಲಕ್ಷ್ಮಿ ಮತ್ತು ಗಣೇಶ ಶಿಲ್ಪಗಳನ್ನು ಗೋಡೆಯು ಭದ್ರವಾಗಿ ಹೊಂದಿಕೊಂಡಿದೆ. ಈ ಬಾಗಿಲಿನ ಹತ್ತಿರವೆ ಕಾವಲು ಗೋಪುರ, ವಸತಿ ಪ್ರದೇಶವಿದ್ದು ಆನೆಗೊಂದಿ ಬಾಗಿಲು ಮತ್ತು ಕೋಟೆಯು ಹೆಚ್ಚಾಗಿ ಈಶಾನ್ಯ ಕಡೆಗಿದೆ. ಈ ಬಾಗಿಲು ಎಡ ಮತ್ತು ಬಲ ಭಾಗದಲ್ಲಿ ಗೋಡೆಯನ್ನು ಒಳಗೊಂಡಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಕೋಟೆಗಳಲ್ಲಿ ಮೂರು ಪ್ರಕಾರಗಳಿವೆ. ನೆಲದ ಮೇಲೆ ಕಟ್ಟಿದ ಸ್ಥಳ ದುರ್ಗಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಬೆಟ್ಟದ ಮೇಲೆ ಕಟ್ಟಿದ ಗಿರಿದುರ್ಗಳ ಸಂಖ್ಯೆ ಗಣನಿಯವಾಗಿವೆ. ಕೆಲವು ಕೋಟೆಗಳ ಅರ್ಧಭಾಗವನ್ನು ಬೆಟ್ಟದ ಮೇಲೆ ಕಟ್ಟಿದ್ದು, ಐತಿಹಾಸಿಕವಾಗಿ ಅತ್ಯಂತ ಪ್ರಮುಖವಾದುದಾಗಿದೆ.

**ಪರಾಮರ್ಶನ ಗ್ರಂಥಗಳು**

- ಬೆಟಗೇರಿ ಕೃಷ್ಣಶರ್ಮ. (1971). *ಕರ್ನಾಟಕ ಜನಜೀವನ.*
- ದೇವರಕೊಂಡಾರೆಡ್ಡಿ. (1999). *ಶಾಸನ ಸಂಪುಟ 01.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಪಾಟೀಲ್ ಚನ್ನಬಸಪ್ಪ ಎಸ್. (1999). *ಕರ್ನಾಟಕದ ಕೋಟೆಗಳು ಸಂಪುಟ 01.* ಕನ್ನಡ ವಿಶ್ವವಿದ್ಯಾಲಯ.
- ಗೋಪಾಲ್, ಬಿ. ಎಸ್. (2015). *ಹಂಪೆ: ಒಂದು ಸುಂದರ ಕಾವ್ಯ.* ಭಾರತೀಯ ಪ್ರಕಾಶನ.
- ಶರಣ ಬಸಪ್ಪ ಕೋಲ್ಕರ್ (1994). *ಕನಕಗಿರಿ ಪ್ರದೇಶದ ಸ್ಮಾರಕಗಳು ಮೂರ್ತಿಶಿಲ್ಪಗಳು.* ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ.

**ಅನಬಂಧ 1: ಛಾಯಾಚಿತ್ರಗಳು**



**ತಳವಾರಗಟ್ಟ ಪ್ರವೇಶದ್ವಾರ**



**ಸುಂಕದ ಬಾಗಿಲು**



**ಗಗನ್ ಮಹಲ್**



**ಬಂಡೆಗಲ್ಲಿನ ಮೇಲೆ ಕೊರೆದಿರುವ ಆನೆಗೊಂದಿ ಕೋಟೆ**


ಬೆಟ್ಟದ ಮೇಲೆನ ಕೋಟೆಗೋಡೆ


ಪ್ರಸ್ತುತ ನಿರ್ಮಾಣವಾದ ಕೋಟೆಯ ಪ್ರವೇಶ ದ್ವಾರ


ಕೋಟೆಗೋಡೆಗೆ ತಗ್ಗಿಕೊಂಡಿರುವ ನಾಗರ ಶಿಲ್ಪ


ಗಾರೆಯನ್ನು ತಯಾರಿಸುವದೃಶ್ಯ


ಪ್ರವೇಶದ್ವಾರದ ಪಕ್ಕದಲ್ಲಿರುವ ಮೆಟ್ಟಿಲುಗಳು


ಪೂರ್ವಕ್ಕೆ ಇರುವ ಕೋಟೆಗೋಡೆ